ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

ಸಿಸಿ ನಂ. 96/2022

| ಫಿರ್ಯಾದಿ | | ಆರೋಪಿ |
|---|---|---|
| ದಿ ಅಕ್ಷಯ ಕೋ ಆಪ್ ಕ್ರೆಡಿಟ್ ಸೊಸೈಟಿ ಲಿ., ಕಾರವಾರ , ಶಾಖೆ ಕುಮಟಾ | ವಿರುದ್ಧ | ಶ್ರೀಮತಿ ವಿದ್ಯಾ ನಾಗೇಶ ಶೇಟ್ |

ಆರೋಪಿಃ

ವಿದ್ಯಾ ನಾಗೇಶ ಶೇಟ್ ,
ನೌಕರಿ, ರೇಲ್ವೆ ಇಲಾಖೆ, ಧಾರವಾಡ ಮುಗದ ಸ್ಟೇಶನ್ ,
ಚಂದಾವರ, ಹೊನ್ನಾವರ.

– ದಂಡ ಪ್ರಕ್ರಿಯಾ ಸಂಹಿತೆ ಕಲಂ.251 ರಡಿ ಆಪಾದನೆ –

ನೀವು ದಿಃ 08-11-2016 ರಂದು ಫಿರ್ಯಾದುದಾರ ಸಂಸ್ಥೆಯಿಂದ ವೈಯಕ್ತಿಕ ಸಾಲದ ಕುರಿತು ರೂ. 2,50,000/-ಗಳನ್ನು ಸಾಲವನ್ನು ಪಡೆದಿದ್ದು, ಸದರಿ ಸಾಲವು ಕಟಬಾಕಿಯಾಗಿದ್ದರಿಂದ ನೀವು ಸದರಿ ಸಾಲದ ತೀರುವಳಿಯ ಸಲುವಾಗಿ ದಿಃ 18-01-2019 ರಂದು ಫಿರ್ಯಾದುದಾರ ಸಂಘಕ್ಕೆ ನಿಮ್ಮ ಖಾತೆ ಇರುವ ಕೆನರಾ ಬ್ಯಾಂಕ್ , ಚಂದಾವರ ಶಾಖೆಯ ಚೆಕ್ ನಂ. 319309 ನೇದರ ರೂ. 3,00,000/- ಕ್ಕೆ ಚೆಕ್ ನ್ನು ನೀಡಿದ್ದು, ಸದರಿ ಚೆಕ್ ನ್ನು ನಗದೀಕರಿಸಲು ಅವರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕುಮಟಾ ಶಾಖೆಗೆ ಹಾಜರು ಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ ಎಂಬ ಹಿಂಬರಹದೊಂದಿಗೆ ಚೆಕ್ ಅಮಾನ್ಯಗೊಂಡು ವಾಪಸ್ಸು ಬಂದಿದ್ದು , ಈ ಕುರಿತು ನಿಮಗೆ ದಿಃ 14-02-2019 ರಂದು ಅವರ ವಕೀಲರ ಮುಖಾಂತರ ನೋಂದಾಯಿತ ಅಂಚೆ ನೋಟಿಸು ನೀಡಿದ್ದು, ಸದ್ರಿ ನೋಟಿಸು ನಿಮಗೆ ದಿಃ 16-02-2019 ರಂದು ಜಾರಿಯಾಗಿದ್ದರೂ ಸಹ ನೀವು ಚೆಕ್ ನಲ್ಲಿ ಹೇಳಿರುವ ಹಣವನ್ನು ವಾಪಸ್ಸು ಕೊಡದೇ , ಕಲಂ 138 ಎನ್ ಐ ಆ್ಯಕ್ಟ ನೇದರ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಅದಕ್ಕೆ ಏನು ಹೇಳುತ್ತೀರಿ?

**ಪ್ರಶ್ನೆ - 1** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

<u>ಉತ್ತರ –</u>

**<u>ಪ್ರಶ್ನೆ – 2</u>** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ಪ್ರತಿ ರಕ್ಷೆ ಇದೆಯೆ?

<u>ಉತ್ತರ –</u>

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 26-09-2025 .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ